ಅವಳೆಪ್ಪ ರೂಟು ಕೇಳಿ ನಂಬರ್ ಬರಿಸಿ ಮನೆಕಡಿ ಮುಖಮಾಡಿಕೊಂಡು ಬರುವಾಗ, ದಾರಿಯಲ್ಲಿ ನಂಬರ್ ಬಂದರೆ ಅದೇ ರಕ್ಕದ ಮೇಲೆ ಯರ್‍ರ್ಯಾರಿಗೆ ಮೊದಲು ಮುಟ್ಟಿಸಬೇಕಂತ ಲೆಕ್ಕ ಹಾಕಿಕೊಂತ ಬರಾಕತ್ತಿದ್ದ. ಹೊಲಕ್ಕೋಗಿ ಬಂದಿದ್ದ ಮಾರೆಮ್ಮ ಈ ಕಡೆ ಮಾಯಿಕಿಗೆ ಭೋಗಕ್ಕ ಜಡೆ ಹಾಕಿ ಗ್ವಾಡಿಗೆ ಇಬ್ಬರನ್ನು ಜೋಡಿಸಿ ಕುಂದ್ರಿಸಿದ್ದಳು. ಆಮೇಲೆ ಎಲೆಚೀಲದಲ್ಲಿ ಕೈಯಾಕಿ ಕರೆಲೆ ಮತ್ತು ಬೆಟ್ಟಡಿಕೆ ಮತ್ತು ಸುಣ್ಣದ ಚೂರುಗಳನ್ನು ಹೊರತೆಗೆದಳು. ಅವೆಲ್ಲವನ್ನು ಸೇರಿಸಿ ಬಾಯಲ್ಲಿ ತುರುಕಿದಾಗ 'ಯಮಾ.. ಯಮಾ.. ನಮ್ಮಿಗಿ ಎಲೆ ಕೊಡು.. ಎಲೆ ಕೊಡು' ಅಂತ ಮಾಯಿಕ್ಕಿ ಭೋಗಕ್ಕ ಬೇಡಿಕೊಂಡರು. ಪ್ರತಿ ಸಾರಿ ಅವರಮ್ಮ ಎಲೆ ಹಾಕೋವರೆಗೂ ಕಾದು ಇದೇ ರೀತಿ ಹಠಮಾಡಿ ಅವಳ ಬಾಯಿಂದ ಕಸಿದುಕೊಳ್ಳುತ್ತಿದ್ದವು. ಮಾರೆಮ್ಮ ಈ ಸಲ ಎಲೆ ಕೊಡುವದಕ್ಕೆ ತಡಮಾಡಿದಾಗ ಯಮಾ ನನಿಗಿ.. ಯಮಾ ನನಿಗಿ... ಅಂತ ಆಕಿನ ಕೊರಳಿಗೆ ಇಬ್ಬರು ತಮ್ಮ ಎರಡು ಕೈಗಳನ್ನ ಹಾಕಿ ಜೋತುಬಿದ್ದವು. ಮಾರೆಮ್ಮ ತನ್ನ ಗರಗಸದಂತಹ ಹಲ್ಲಲ್ಲಿ ತುಂಡು ತುಂಡಾಗಿ ಕತ್ತರಿಸಿದ ಎಲೆಅಡಿಕೆಯನ್ನು ಎರಡು ಭಾಗ ಮಾಡಿ ಮಾಯಿಕಿ, ಭೋಗಕ್ಕಗ ಕೊಟ್ಟಳು. ಅವು ಎಲೆಯನ್ನು ಬಾಯಿಗೆ ಹಾಕಿಕೊಂಡು ನಾಲಿಗೆಯನ್ನು ಉದ್ದಮಾಡಿ ಹಾವಿನಂತೆ ಬುಳಬುಳನೆ ಅಲ್ಲಾಡಿಸಿದವು. ಇವರಿಬ್ಬರ ನಾಲಿಗೆ ತಾಯಿಯ ನಾಲಿಗೆಯಂತೆ ಕೆಂಪಾಗಿರಲಿಲ್ಲ. 'ಯಮಾ ನಮ್ಯಾವಕ ನಾಲಿಗೆ ಕೆಂಪಗಾಗಿಲ್ಲ?' ಅಂತ ಕೇಳಿದಾಗ ಮಾರೆಮ್ಮ, 'ಮುಂದ ಯಾರಿಗೆ ಒಳ್ಳೆ ಗಂಡ ಸಿಗತಾನ ಅಂತೋರು ನಾಲಿಗೆ ಮಾತ್ರ ಕೆಂಪಗಾಗ್ತವ' ಅಂತ ಹೇಳಿದಾಗ ಮಾಯಿಕಿ, ಭೋಗಕ್ಕ ಇಬ್ಬರು ಅಳಲು ಸುರು ಮಾಡಿದರು. 'ಎದಕಳತೀರಿ? ನಿಮ್ಮ ಹಾಳಾಗ್ಯೋಗಾ ಎದಕಾ?' ಅಂದು ಗದರಿಸಿದಾಗ ಮಾಯಿಕಿ, 'ಹಂಗಾರ ನಮಿಗಿ ಒಳ್ಳೆ ಗಂಡ ಸಿಗಲ್ಲ ಹ್ಞೂ... ಹ್ಞೂ...' ಅಂತ ಬಿಕ್ಕಿ ಬಿಕ್ಕಿ ಅಳಲು ಮುಂದಾದರು.

'ಗೇಣುದ್ದಿಲ್ಲ ಗಂಡ್ರ ಚಿಂತಿ ನಿಮಿಗಿ ಇವಾಗ ಬಂತೇನು? ನಾನು ಸುಳ್ಳ ಅಂದೆ. ಅದನ್ನ ಅಂಬಾಕ ಮಾಡ್ಯಾರ ಹಿರೇರು. ನಾಲಿಗೆ ಕೆಂಪಗಾದೋರಿಗೆಲ್ಲಾ ಒಳ್ಳೆ ಗಂಡ್ರು ಸಿಕ್ಕಿದ್ರ, ಊರು ತುಂಬ ಒಳ್ಳೆ ಗಂಡ್ರು ಇರುತಿದ್ರು, ನಿಮ್ಮಪ್ಪನಂತೋರು ಓಸಿ, ಇಸ್ಪಟ್ಟು ಕುಡುದು ಹಾಳಾಗೋರು ಯದಕ ಸಿಗುತ್ತಿದ್ರು ಹೇಳು' ಅಂತ ಮಕ್ಕಳನ್ನ ಸಮಾಧಾನ ಮಾಡಿದಳು. ಮುಂಜೇಲಿಂದ ರೂಟ ನೋಡಾಕಂತ ಹೋಗಿ ಕೂಳು ನೀರಿಲ್ಲದ ಬಾಯಿ ಒಣಗಿಸಿಕೊಂಡು, ಕಳ್ಳ ಬೆಕ್ಕಿನಂಗ ಒಂದೊಂದೆ ಹೆಜ್ಜೆ ಇಟಗೋಂತ ಬರುತ್ತಿದ್ದ ಅವಳೆಪ್ಪ ಮೆಲ್ಲಕ ಬಂಕ ಏರಿ ಕುಳಿತ. ಮಾರೆಮ್ಮ ಗಂಡನ ಕಡೆ ಮುಖ ತಿರುವಿ ಒಂದು ಮಣ ಮೇವು ತಿಂದು ಮಕ್ಕಂಡಿದ್ದ ಎಮ್ಮೆ ಬುಸ್ಸುಗರೆದಂಗ ಬುಸ್ಸುಗರೆದಳು. ಅವಳೆಪ್ಪಗ, 'ಇವಳಿಗೇನಾದ್ರೂ ಪಾತಪ್ಪನ ಕಟ್ಟಿಗೆ ಕುಂತು ಓಸಿ ರೂಟು ಕೇಳಿದ್ದು ಯಾರ ಬಾಯಿಂದಾದ್ರೂ ಕೇಳ್ಯಾಳೇನು?' ಅಂತ ಅನುಮಾನ ಬಂತು. ಅದೇ ಭಯದಿಂದ ಕುಂಡೆಯ ಒಂದು ಭಾಗವನ್ನು ನೆಲಕ್ಕೆ ಹಚ್ಚಿ ವಪ್ಪರೆ ಕುಂತಿದ್ದ. ಆ ಅನುಮಾನ ನಿಜವಾಗಿತ್ತು. ಮಾರೆಮ್ಮನ ಬಾಯಿಲಿಂದ ಬೈಗುಳಗಳು ಬದನೆಕಾಯಿ ಬಾಣ ಸಿಡದಂಗ ಪಟಪಟನೆ ಸಿಡದವು. 'ಲೋ ಜಿಟ್ಟೆ ಎಲ್ಲಾರೂ ಬಾಳೇವು ಮಾಡಾಕ ದಾರಿ ನೋಡಿಕೊಂಡ್ರ, ನೀವು ಮನೆ ಮುಚ್ಚಾಕ ದಾರಿ ನೋಡಿಕೆಂತಿರೇನು?' ಅಂದಳು. ಅವಳೆಪ್ಪಗ ಬೈಸಿಗೊಂಡು ಬಡಸಿಗೊಂಡು ಸಾಕುಸಾಕಾಗಿಬಿಟ್ಟಿತ್ತು. ಆದ್ರೂ ಇಲ್ಲಿವರೆಗೆ ತಾಳ್ಮೆ ತಗಾಂತ ಬಂದಿದ್ದ. ಇವತ್ಯಾಕ ಮುಂಜೇನಿಂದ ಉಣಲಾರದಕ ಏನೊ? ಸಿಟ್ಟು ಗುಡ್ಡ ಏರಿದಂಗ ಏರಿ ಬರಾಕತ್ತಿತ್ತು. ಆದ್ರೂ ಒಳಗ ನುಂಗಿಕೊಂಡು ಸುಮ್ಮನಿದ್ದ. ಒಂದೇ ಮಾತಿಗೆ ಬಿಡಬೇಕಲ್ಲ, 'ಲೋ ಆಡಲೋ... ಓಸಿ ಆಡಲೋ ಈ ಮನೇನಾ ದೀಪಾ ತೆಗದುಬಿಡಲೋ...' ಅಂತ ಉದ್ದಕ ಇಡೀ ಓಣಿಗೆ ಕೇಳಂಗ ವದರಿಬಿಟ್ಟಳು. ಈ ಸಲ ಅವಳೆಪ್ಪನ ಸಿಟ್ಟಿನ ಕಟ್ಟೆ ಒಡೆಯಿತು. 'ಲೇ ನಿಮ್ಮಮ್ಮನ ಯಲ್ಲಿಗಂತ ತಡಕಲೆಲೇ?' ಅಂತ ಬಂಡೆ ವರಿಸಿಗ್ಯಾಂತ ಕುಂತಿದ್ದ ಮಾರೆಮ್ಮಗ ಒಂದೇಟು ಬೆನ್ನಿಗೆ ಛಟ್ ಅಂತ ಚುರುಕ್ಮುಟ್ಟಂಗ ಕೊಟ್ಟುಬಿಟ್ಟ. ಏಟು ಬಿದ್ದಿದ್ದೆ ತಡ ಮೈಮೇಲೆ ಹಾವರಿದಂಗಾಗಿ ಲಬ್... ಲಬ್... ಅಂತ ವಯ್ಕೊಂಡು ಬರ್‍ರ್ರೆಪೋ... ನನ್ನ ಕೊಲ್ಲತಾನ ಇವನು, ಇವನ ಕೈಗೆ ಮುಳ್ಳಮುರಿಲಿ, ಹೋಸುಉರೀಲಿ' ಅಂತ ಒಂದು ನಿಮಿಷದಲ್ಲಿ ಇಡೀ ಓಣಿನ ಮನೆ ಮುಂದ ಬಂದು ನಿಂದ್ರಂಗ ಮಾಡಿಬಿಟ್ಟಳು. ಜಂತಗಲ್ ನಿಂಗಮ್ಮ, ಅಯ್ಯಳ್ಳೋರು ಸಾಂತಮ್ಮ, ಕಾಮಾರಧೀರಮ್ಮ, ಜಿನ್ನದೋರು ಹಂಪಮ್ಮ ಹತ್ತತ್ತ ವರುಷದ ಹಿಂದ ಗಂಡನ ಕಳಕಂಡೋರು ಎಲ್ಲರೂ ಅವಳೆಪ್ಪನ ಸುತ್ತುವರೆದುಬಿಟ್ಟರು. 'ಅಬಾಬಾ ಈ

